# ಚಿತ್ರಕತೆ ನೈಜವಾಗಿರಬೇಕು

**ಪೂಜಾ ಭಾರಿತ್ತಾಯ**
**ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯ ಚಂಚಲಾ**

◆ **ಹಿನ್ನೆಲೆಯ ಗಾಯನದಿಂದ ಮುನ್ನೆಲೆಗೆ ಪಲ್ಲಟ ಆಗಿದ್ದು ಹೇಗೆ?**

ಎಂಬಿಎ ಮುಗಿಸಿದ ನಂತರ ಸಂಗೀತ ಕಲಿಕೆಯನ್ನು ಮುಂದುವರಿಸಿದ್ದೆ. ಉದ್ಯೋಗದ ಬಗ್ಗೆ ಯಾವ ಯೋಚನೆಯನ್ನೂ ಮಾಡಿರಲಿಲ್ಲ. ಸಂಗೀತ ಮೊದಲಿನಿಂದಲೂ ಆಸಕ್ತಿ ಇತ್ತು. ಅಷ್ಟರಲ್ಲಿ ರಂಗಭೂಮಿಯತ್ತ ಆಕರ್ಷಿತಳಾದೆ. ನಾಟಕಗಳಿಗೆ ರಂಗಗೀತೆಗಳನ್ನು ಹಾಡಲು ಆರಂಭಿಸಿದೆ. ಜಯಶ್ರೀ ಅವರ ಜೊತೆ ಕೆಲ ನಾಟಕಗಳಿಗೆ ಹಾಡಿದ್ದೇನೆ. ಅಭಿನಯಕ್ಕೆ ಇಲ್ಲಿ ಅವಕಾಶ ಸಿಕ್ಕಿತು ಮಾಡುತ್ತಿದ್ದೇನೆ. ಇದಕ್ಕಿಂತ ಮುಂಚೆ 'ಚಮಕ್' ಎನ್ನುವ ಸಿನಿಮಾದಲ್ಲಿ ರಶ್ಮಿಕಾ ಗೆಳತಿಯ ಪಾತ್ರವನ್ನು ಮಾಡಿದ್ದೆ. ಅದು ಪುಟ್ಟ ಪಾತ್ರ, ಅಭಿನಯ ಅಷ್ಟು ಇರಲಿಲ್ಲ. ಇಲ್ಲಿ ಸೀತಾರಾಂ ಅವರ ಗರಡಿಯಲ್ಲಿ ಕಲಿಯುತ್ತಿದ್ದೇನೆ. ಇದರ ಜೊತೆ ಸಂಗೀತದ ತಾಲೀಮು ಮುಂದುವರಿದಿದೆ.

◆ **ನಿಮ್ಮ ಬಗ್ಗೆ ನೀವು ಹೇಳುವುದಾದರೆ...**

ಕಾಸರಗೋಡು ಸಮೀಪದ ಅಡೂರು ನಮ್ಮ ಅಜ್ಜಿ ಮನೆ, ಅದೇ ನನ್ನ ಹುಟ್ಟೂರು. ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಚೆನ್ನೇನಹಳ್ಳಿಯಲ್ಲಿ ನೆಲೆಸಿದ್ದೇನೆ. ಬೆಂಗಳೂರು ನಗರ ಸಮೀಪ ಇದ್ದರೂ ನಾನು ಬೆಳೆದಿದ್ದೂ ಹಳ್ಳಿಯಲ್ಲಿಯೇ. ಬಿಬಿಎಂ ಓದಲು ಬಸವನಗುಡಿಯ ಬಿಎಂಎಸ್ ಕಾಲೇಜಿಗೆ ಸೇರಿದೆ. ಅಲ್ಲಿ ನನಗೆ ಸಾಂಸ್ಕೃತಿಕ ಜಗತ್ತಿನ ಪರಿಚಯ ಆಯಿತು. ಆ ಮೂಲಕ ಹಲವರ ಪರಿಚಯವೂ ಆಯಿತು. ನಾನು ಹಾಡು ಪಾಡು ಎಂದು ನಾಲ್ಕಾರು ಕಡೆ ಸುತ್ತಾಡಿದೆ. ಮನೆಯಿಂದ ಕೂಡ ನನ್ನ ಅಭಿಲಾಷೆಗೆ ಒಳ್ಳೆಯ ಪ್ರೋತ್ಸಾಹ ಸಿಕ್ಕಿದೆ. ಹಾಗಾಗಿ ಉದ್ಯೋಗಕ್ಕಿಂತ ಹವ್ಯಾಸವನ್ನೇ ಮುಂದುವರಿಸಿದ್ದೇನೆ. ಇತ್ತೀಚೆಗೆ ದಾಂಪತ್ಯ ಬದುಕಿಗೆ ಕಾಲಿಟ್ಟಿದ್ದೇನೆ. ನನ್ನ ಪತಿ ಕೂಡ ನನ್ನ ಆಶೆಗೆ ಬೆನ್ನೆಲುಬಾಗಿ ಪೋಷಿಸುತ್ತಿದ್ದಾರೆ.

◆ **ಮಧ್ಯಂತರ ಒಂದು ಪಾತ್ರ ಪ್ರವೇಶದ ಸವಾಲನ್ನು ಗೆದ್ದದ್ದು ಹೇಗೆ?**

ಯಾವುದೇ ಪಾತ್ರವನ್ನು ಮತ್ತೊಬ್ಬ ಕಲಾವಿದರು ಅರ್ಧದ ನಂತರ ಮುಂದುವರಿಸುವುದು ಪ್ರಯಾಸದ ಕೆಲಸ. ನನ್ನ ಈ ಪಾತ್ರವನ್ನು ಮೊದಲು ಐಶ್ವರ್ಯ ರಂಗರಾಜು ಮಾಡುತ್ತಿದ್ದರು. ವಯೋಮಾನದಲ್ಲಿ ಅವರು ನನಗಿಂತ ಕಿರಿಯರು. ಅವರಲ್ಲಿ ವಯೋ ಸಹಜ ಚಂಚಲತೆ ಎನ್ನುವುದು ಸಹಜವಾಗಿತ್ತು. ನನಗೆ ಅದು ಸಹಜ ಆಗಿರಲಿಲ್ಲ. ಅದನ್ನು ನಾನು ಸ್ವಯಂ ತೆಗೆದುಕೊಳ್ಳಬೇಕಿತ್ತು. ಪಾತ್ರ ನನ್ನನ್ನು ಹುಡುಕಿ ಬರುವ ಹೊತ್ತಿಗೆ ಚಂಚಲಾ ಬೆಳೆದಿದ್ದಳು. ವಿದೇಶದಲ್ಲಿ ಮೆಡಿಕಲ್ ಓದಿ ಬಂದಿದ್ದಾಳೆ. ಅವಳಿಗೊಂದು ಪ್ರೌಢಿಮೆ ಬಂದಿದೆ, ವೃತ್ತಿಪರವಾಗಿದ್ದಾಳೆ ಎನ್ನುವ ಸಂದರ್ಭಕ್ಕೆ ಪ್ರವೇಶ ಮಾಡಿದೆ. ಆದರೂ ಕಷ್ಟಕರವಾಗಿತ್ತು. ವೀಕ್ಷಕರಲ್ಲಿ ಹಳೆಯ ಪಾತ್ರಧಾರಿಯ ಛಾಯೆ ಅಚ್ಚೊತ್ತಿರುತ್ತದೆ. ನನಗೆ ಎದುರಾದ ಸವಾಲು ಏನೆಂದರೆ ಪಾತ್ರವನ್ನು ಮುಂದುವರಿಸುವುದಕ್ಕಿಂತ ಪಾತ್ರ ನಿರ್ವಹಣೆಯಲ್ಲಿ ಸಮತೋಲ ಕಾಪಾಡುವುದೇ ಒತ್ತಡ ಇತ್ತು.

◆ **ಚಂಚಲಾ ತುಂಬಾ ಮಾಡರ್ನ್ ಹುಡುಗಿ, ಅವಳಲ್ಲಿ ನಂಬಲಾಗದಷ್ಟು ಬದಲಾವಣೆ ಆಗಿವೆ ಏಕೆ?**

ಓದಿದವಳು, ಬುದ್ಧಿವಂತೆ ಆಗಿದ್ದರೂ ನಂಬಿಕೆ ದ್ರೋಹಕ್ಕೆ ತುತ್ತಾಗಿದ್ದು ಅವಳ ಆತ್ಮವಿಶ್ವಾಸವನ್ನೇ ಅಲುಗಾಡಿಸಿದೆ. ಎಲ್ಲದಕ್ಕಿಂತ ವಯೋ ಸಹಜ ಬದಲಾವಣೆಗಳು ಆಕೆಯಲ್ಲಿಯೂ ಆಗಿವೆ. ನಮ್ಮ ಬುದ್ಧಿ–ಭಾವ ಬೆಳೆಯುತ್ತಾ ವಿಕಾಸ ಆಗುತ್ತವೆ. ಆಕೆಯ ವ್ಯಕ್ತಿತ್ವದಲ್ಲೂ ಪ್ರೌಢಿಮೆ ಬೆಳೆದಿದೆ. ಪ್ರತಿಷ್ಠಿತ ಕುಟುಂಬದಲ್ಲಿ ಬೆಳೆದು ಬಂದ ತನಗೆ ಸಾರ್ವಜನಿಕವಾಗಿ ಅಪಮಾನ ಆಗಿದೆ ಎನ್ನುವುದು ಹಿಂಜರಿಯುವಂತೆ ಮಾಡಿದೆ. ಆದರೂ ಅವಳಲ್ಲಿನ ಮುಗ್ಧತೆ ಇನ್ನೂ ಇದೆ. ತನ್ನ ಆಸ್ಪತ್ರೆ ಹಣಕ್ಕಿಂತ ಜನಸೇವೆಗೆ ಒತ್ತು ನೀಡಬೇಕೆನ್ನುವ ಸ್ಪಷ್ಟತೆ ಇದೆ. ಅದಕ್ಕೆ ತನ್ನ ತಂದೆ ವಿರೋಧ ಇದ್ದರೂ ತನ್ನ ಅಕ್ಕ– ಅಮ್ಮನ ಬೆಂಬಲದಿಂದ ತನ್ನ ಜನಪರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದಾಳೆ.

◆ **ಟೀವಿಗೆ ಪ್ರವೇಶ ಮಾಡಿದ ಸಂದರ್ಭ ಹೇಗಿತ್ತು?**

ಚಂಚಲಾ ಪಾತ್ರಕ್ಕೆ ನಾನು ರಿಪ್ಲೇಸ್ ಆಗುವ ಮುನ್ನ ನನ್ನ ಅಮ್ಮ ರಶ್ಮಿ ಪಾತ್ರಕ್ಕೆ ರಿಪ್ಲೇಸ್ ಆಗಿತ್ತು. ಆ ಪಾತ್ರವನ್ನು ದೀಪಾ ನಿರ್ವಹಿಸುತ್ತಿದ್ದಾರೆ. ಅವರು ಬೆನಕ ತಂಡದಲ್ಲಿ ನಾಟಕ ಆಡ್ತಾರೆ. ನಾನು ಅದೇ ತಂಡದಲ್ಲಿ ಹಾಡುತ್ತೇನೆ. ಸ್ವಲ್ಪಮಟ್ಟಿಗೆ ಅವರ ಪರಿಚಯ ನನಗೆ ಮೊದಲೇ ಇತ್ತು. ನನ್ನ ತಲೆಯಲ್ಲಿ ರಿಪ್ಲೇಸ್ ಭೂತ ಮೊದಲೇ ನೆಲೆ ಮಾಡಿಗೊಂಡಿತ್ತು. ಅದನ್ನು ದೂರ ಮಾಡಿದವರು ಅವರು. ಗಾನವಿ (ಜಾನಕಿ) ತಂದೆ ಭಾರ್ಗಿ, ನಿರ್ದೇಶಕರ ಪ್ರೋತ್ಸಾಹ ಪಾತ್ರ ಮುಂದುವರಿಸಲು ಸಾಧ್ಯವಾಯಿತು. ಆರಂಭದಲ್ಲಿ ಯಾವ ಸೀನ್‌ಗಳೂ ಒಂದೇ ಟೇಕ್‌ಗೆ ಬರುತ್ತಿರಲಿಲ್ಲ; ನನಗೆ ಕಸಿವಿಸಿ ಆಗುತ್ತಿತ್ತು. 'ನಿನಗೆ ಎಷ್ಟು ಸಾಧ್ಯವೋ ಅಷ್ಟನ್ನು ಚೆನ್ನಾಗಿ ಮಾಡು. ಯೋಚನೆ ಮಾಡಬೇಡ. ಎಲ್ಲರೂ ಕಲಿಯಲು ಬಂದಿರೋದು. ಇದೇ ಸ್ಥಿತಿ ನನಗೂ ಇತ್ತು' ಎಂದು ಅಮ್ಮ ರಶ್ಮಿ ಹೇಳಿದರು. ನೆಗೆಟಿವಿಟಿ ಬಂದೇ ಬರುತ್ತದೆ ಮಾತ್ರವಲ್ಲ ಹಲವು ಅಭಿಪ್ರಾಯ ವ್ಯಕ್ತವಾಗಬಹುದು ಅದೆಲ್ಲವನ್ನೂ ಬಿಟ್ಟು ಪಾತ್ರವನ್ನು ಮಾಡು ಎಂದು ಹೇಳಿದರು. ಅದರಂತೆ ನಾನು ಮಾಡುತ್ತಿದ್ದೇನೆ.

◆ **ಮುಂದಿನ ಪ್ರಾಜೆಕ್ಟ್ ಹೇಗಿರಬೇಕು ಎಂದು ಬಯಸುತ್ತೀರಿ?**

ಇದು ನನಗೆ ಮೊದಲ ಅನುಭವ. ಈ ಧಾರಾವಾಹಿ ನೈಜವಾಗಿ ಇದೆ ಎಂದು ನನಗೆ ಅನ್ನಿಸುತ್ತದೆ. ತೀರಾ ನಾಟಕೀಯ ಇಲ್ಲವೇ ಕೃತಕವಾದರೆ ಇಷ್ಟ ಆಗದಿರಬಹುದು. ಒಬ್ಬ ನಟಿಯಾಗಿ ಎಲ್ಲಾ ಪಾತ್ರಗಳನ್ನೂ ಮಾಡುತ್ತೇನೆ. ಪ್ರತಿ ಪಾತ್ರದಲ್ಲೂ ಕಲಿಯುವುದು ಇರುತ್ತೆ. ನಾನು ಹೆಚ್ಚು ಕಿರುಚಿತ್ರಗಳನ್ನು ನೋಡುತ್ತೇನೆ. ಆ ಕಾರಣಕ್ಕೋ ಏನೋ ಗೊತ್ತಿಲ್ಲ, ಯಾವುದೇ ಕಥೆ ನೈಜ ಬದುಕಿಗೆ ಹತ್ತಿರವಿದ್ದು, ದೈನಂದಿನ ಬದುಕಿನಂತೆ ಕಾಣಿಸುವುದು ಮೆಚ್ಚುಗೆ ಆಗುತ್ತದೆ.



■ **ರಾಘವೇಂದ್ರ ಕೆ.**